ವಂಶದ ಕೊನೆತಲೆ ನೀನೆ ಆದ್ದರಿಂದ ಈ ಯಜಮಾನಿಕೆ ಪಟ್ಟವನ್ನ ನೀನೆ ಕಟ್ಟಿಕೊಳ್ಳಬೇಕೆಂದು ಅಣ್ಣತಮ್ಮಂದಿರು ಕುಲೋಸ್ತರುಗಳು ಸೇರಿಕೊಂಡು ಮನೆದೇವರ ಯಜಮಾನಿಕೆ ಪಟ್ಟವನ್ನ ಅಪ್ಪನಿಗೆ ಕಟ್ಟಿಬಿಟ್ಟಿದ್ದರು. ಇಂತ ಪಟ್ಟದ ಯಜಮಾನಿಕೆಯಿಂದ ನಮ್ನೂರು ನನ್ನೆಸರು ಎಂಬ ಹಂಬಲದ ಅಪ್ಪನಿಗೆ ಸ್ವರ್ಗ ಮೂರೆ ಗೇಣೈತೆ ಅಂಬಂಗಾಗಿ ಕುಂತು ಕಡೆ ಕೂರಲಾರದ ನಿಂತಕಡೆ ನಿಲ್ಲಲಾರದ ಆನಂದವುಂಡು ಬಿಟ್ಟ. ಈಗೀಗ ಅಪ್ಪ ಬೆಂಗಳೂರಿಗಿಂತ ಅವನ ಹುಟ್ಟಿದೂರಲ್ಲೆ ಹೆಚ್ಚಾಗಿ ಇರಲಾರಂಭಿಸಿದವನು ಹಳ್ಳಿಯಲ್ಲಿದ್ದ ಹಳೆಯ ಹೆಂಚಿನ ಮನೆಯನ್ನು ಕೊಡವಿಸಿ ಈಕಾಲಕ್ಕೆ ತಗ್ಗಟ್ಟಾದ ಮನೆಯನ್ನು ಕಟ್ಟಿಸಿಕೊಂಡ. ಇಷ್ಟೆಲ್ಲದರ ನಡುವೆ ಇಷ್ಟು ದಿನ ಜೊತೆಯಲ್ಲೆ ಇದ್ದ ನಮ್ಮಣ್ಣ ಅತ್ತಿಗೆಯ ಭಾವನೆಗಳು ಮನೆಯ ಒಡನಾಟದಲ್ಲಿದ್ದ ಗಳಿಗೆಗಳು ಯಾವಾಗ ಏರುಪೇರಾದವೋ ಗೊತ್ತಾಗಲಿಲ್ಲ. ನಾನು ಕಂಡಂತೆ ಅಪ್ಪನಿಗೆ ಹೋಲಿಸಿದರೆ ಅಮ್ಮನಿಗೂ ಸ್ವಾರ್ಥ ಕಮ್ಮೀಯೇನಿರಲಿಲ್ಲ.

ಮನೆಯಲ್ಲಿ ಅವಳ ಕಾರುಬಾರಿನಲ್ಲೆ ಅಡುಗೆ ತಿಂಡಿಯಾಗ್‌ಬೇಕು, ಅವಳನ್ನ ಕೇಳೇ ಮಾಡ್‌ಬೇಕು. ಅಂಗೇನಾದ್ರು ಸೊಸೆಯಂದಿರು ಮಾಡ್‌ತ್ತಾರಂದ್ರೆ ಒಂದಿಷ್ಟು ಉಪ್ಪು ಕಾರ ಹೆಚ್ಚಾಗಾಂಗಿಲ್ಲ ಕಮ್ಮಿಯು ಆಗಂಗಿರಲಿಲ್ಲ. ಒಂದಿಷ್ಟು ಎಣ್ಣೆಯು ಹೆಚ್ಚಾಗಿ ಉಯ್ಯಂಗಿಲ್ಲ, ಅಮ್ಮನಿಗೆ ಅಳತೆ ಗೋಲಿನ ಸೌಟಿನಲ್ಲಿ ಎಣ್ಣೆಯ ಒಗ್ಗರಣೆಯಾಗಬೇಕು. ಸೊಸೆಯರೆನಿಸಿಕೊಂಡ ಈ ಹುಡುಗಿಯರಿಗೊ ಎಣ್ಣೆ ಉಯಿದಿದ್ದಮ್ಯಾಲೆ ಅವರು ಮಾಡೊ ಅಡಿಗೆಗೆ ಬಣ್ಣವೆ ಬರಲ್ಲ. ಇಂತ ಇಕ್ಕಟ್ಟಿನೊಳಗೆ ರಾತ್ರಿ ಉಂಡುತಿಂದಾದ್ ಮೇಲೆ ಪಾತ್ರೆ ಪಡಗಾನ ತೊಳೆದು ಬಳಿದು ಎತ್ತಿಡುವ ನಿಗಾ ಯಾರಿಗು ಇರ್‌ತಿರಲಿಲ್ಲ. ಅಮ್ಮ ಅಪ್ಪನಿಗೆ ಸಪ್ಪೆಸರು, ಬಸ್ಸಾರು ಬಜ್ಜಿ ಮುದ್ದೆಯೂಟ ಇಂತ ಸೊಗಡಿನ ಸಾರು ಮುದ್ದೆಯೆಂದರೆ ದಿನವು ಹಬ್ಬದಂತೆ ಉಂಬುತ್ತಾರೆ, ನಮಗೊ ನಾವೊ ಅವುಗಳ ಪರಿಚಯವನ್ನ ಮರೆ ಮಾಚುವ ಬೀದಿಬದಿಯ ಗೋಬಿ, ಬೇಲ್ ಪುರಿ, ಪಾನಿಪುರಿ ಪಾವ್ ಬಜ್ಜಿಯಲ್ಲಿ ನಾಲಿಗೆಯ ಚಪಲದ ಉನ್ಮಾರಕ್ಕಿಳಿದವರು. ಉಪ್ಪಿಟ್ಟು ಇಡ್ಲಿ ದೋಸೆ ಪಲಾವುಗಳ ಪಾಕ ಉಡುಕುವ ಬರಾಟೆಯಲ್ಲಿರುವವರು. ಇಂತಾ ಗಳಿಗೆಯಲ್ಲಿ ದಿನಾ ಸಂಜೆಯಾಗ್‌ತಿದ್ದಂತೆ ಅಣ್ಣ ಅತ್ತಿಗೆ ಕಂಪನಿಯಿಂದ ಬರೋವಾಗ್ಲೆ ಅವರ ಬಾಯಿಗೆ ರುಚಿಯಾದ್ದು ತಿಂದು ಬಂದು ಬಿಡೋವರು. ಮನೆಗೆ ಬಂದವರು ಸದ್ದಿಲ್ಲದೆ ಒಳಕ್ಕೋಗುತ್ತಿದ್ದರು ಎಷ್ಟುಒತ್ತಾದ್ರು ರೂಮುಬಿಟ್ಟು ಹೊರಗಡೆ ಬರದವರನ್ನು, ಪವನ ಉಣ್ಣು ಬರ್‍ರೊ ತಳದಾಗಿರೊ ಮುದ್ದೆ ತಣ್ಣಗಾಗೈತೆ ಎಂಬ ಅಮ್ಮನ ಮಾತಿಗೆ, ಅಮ್ಮ ನಮಗೆ ಊಟಬ್ಯಾಡಮ್ಮ ಹೊರಗಡೆ ತಿಂದು ಬಂದಿದ್ದೀವಿ ಎಂಬ ಅಣ್ಣಯ್ಯನ ಮಾತು ಕೇಳಿಸಿಕೊಂಡ ಅಮ್ಮನ ಮನಸ್ಸು ಕೆಂಡಾ ಮಂಡಲವಾಗುತ್ತಿತ್ತು. ಅಲ್ಲವೋ ಪವನ ನೀವು ಅಲ್ಲಿ ತಿಂಬೋವಾಗ ಒಂದು ಪೋನಾದ್ರು ಮಾಡಬಾರ್‌ದೇನೊ? ನಿಮ್ಮ ಭಾಗದ ಎರಡು ಮುದ್ದೇನು ದಿನಾಹೊರಕ್ ಬಿಸಾಡಂಗ್ ಮಾಡ್‌ತ್ತಿದ್ದೀರಾ ಎಂದು ಖಾರವಾಗಿ ಮಾತನಾಡುವ ಅಮ್ಮ ಮತ್ತು ಅಪ್ಪನ ವರ್ತನೆಯೇ ಸರಿಯೋಗಲಿಲ್ಲವೊ. ಅತ್ತಿಗೆಯ ಶ್ರೀಮಂತ ತವರಿನವರು ಬಂದುಹೋಗಲು ಸ್ವತಂತ್ರವಿಲ್ಲ ಎಂತಲೊ? ನಮ್ಮಿಷ್ಟ ಕಷ್ಟಗಳು ಇಲ್ಲಿ ಸಲೀಸಾಗಿ ಉಸಿರಾಡುತ್ತಿಲ್ಲವಂತಲೊ? ಅಣ್ಣ ಅತ್ತಿಗೆಯ ಎದೆಯಲ್ಲಿ ಎಡೆಯಾಡಿ ಏನೇನೊ ಹಲವಾರು ಅಸಮಾಧಾನದ ಕಾರಣಗಳು ಹುಟ್ಟಿಕೊಂಡು, ಈಗ ನನ್ನ ಕಂಪನಿ ಬದಲಾಗೈತೆ ಮನೆಯಿಂದ ಇಲ್ಲಿಗೆ ದೂರವೈತೆಂದು ಒಂದೇ ಒಂದು ಬ್ಯಾಗಿನಲ್ಲಿ ಬಟ್ಟೆ ಜೋಡಿಸಿಕೊಂಡೋದವರು, ವೈಟ್ ಪೀಲ್ಡಿನಲ್ಲಿ ಒಂದು ಒಳ್ಳೆಯ ಮನೆ ಮಾಡಿಕೊಂಡು ಅಣ್ಣ ಅತ್ತಿಗೆ ನಮ್ಮ ಮತ್ತು ಅವರ ನಡುವಿನ ನಂಟಿಗೆ ತಲೆ ಕೊಡವಿಕೊಳ್ಳತೊಡಗಿದರು. ಅಂಗೆ ದಿನಗಳುರುಳಿದಂತೆ ಅತ್ತಿಗೆಯೆಂಬೋಳು ನಮಗ್ಯಾರಿಗು ಪೋನ್ ಮಾಡುವುದನ್ನೆ ನಿಲ್ಲಿಸಿ ಬಿಟ್ಟಳು. ಅಣ್ಣ ಮಾತ್ರ ಯಾವಾಗಲಾದರು ಮಿಟ್ಟು ಬಿದ್ದವನಂತೆ ಪೋನ್ ಮಾಡುತ್ತಿದ್ದ. ಮನೇಲಿ ಅಪ್ಪ ಅಮ್ಮನ ಜೊತೆ ಉಳುಕೊಂಡವನು ನಾನು ಮತ್ತೆ ನನ್ನೆಂಡತಿಯಿಬ್ಬರೆ. ಇವಳು ಅಷ್ಟೆ ನನ್ನೆಂಡತಿಯಾದವಳು ಅವಳು ಬಂದ ಲಾಗಾಯಿತಿನಿಂದ ಅಪ್ಪ ಅಮ್ಮನಿಗೆ ಪೂರಾ ಹೊಂದಿಕೊಂಡವಳೆ ಅಲ್ಲ. ಇನ್ನು ದೊಡ್ಡವರೆ ಹೋದ್ ಮೇಲೆ ಇಲ್ಲಿ ನಮಗಿನ್ನೇನು ಕೆಲಸಾನಪ್ಪ ಇಲ್ಲೇನು ತಿನ್ನಂಗು ಇಲ್ಲ ತೇಗಂಗು ಇಲ್ಲ ನಮಗು ಎಲ್ಲಾದರು ಒಂದು ಮನೆ ಹುಡುಕೊ ಮಾರಾಯ. ಬೆಂಗಳೂರೇನು ಬಿದ್ದು ಉಳ್ಳಾಡುವಷ್ಟು ವಿಶಾಲವಾಗೈತೆ